

ಹತ್ತೊಂಬತ್ತುನೂರಾ ಹತ್ತೊಂಬತ್ತರಲ್ಲಿ ಉಮುರು ನಗರದಲ್ಲಿ ನಿಗರ ರಿಪಬ್ಲಿಕ್‌ನ ಕಂಪನಿಯಲ್ಲಿ ನಾನೊಬ್ಬ ಹರೆಯದ ಕಾರಕೂನನಾಗಿದ್ದೆ. ಅಂದಿನ ದಿನಮಾನಗಳಲ್ಲಿ ಕಾರಕೂನನಾಗಿದ್ದವನಿಗೆ ಇಂದಿನ ದಿನಮಾನದಲ್ಲಿ ಮಂತ್ರಿಗಳಿಗೆ ದೊರೆಯುವಷ್ಟು ಗೌರವವಿತ್ತು. ಅಂದು ನಾನು ಎರಡು ಪೌಂಡು, ಹತ್ತು ಶಿಲಿಂಗ್ ಪಗಾರ ಪಡೆಯುತ್ತಿದ್ದೆ. ಇಷ್ಟು ಕಡಿಮೆ ಪಗಾರವೆ? ಎಂದು ನೀವು ನಗಬಹುದು. ಆದರೆ ಅಂದಿನ ಎರಡು ಪೌಂಡು, ಹತ್ತು ಶಿಲಿಂಗ್‌ಗಳು ಇಂದಿನ ಐವತ್ತು ಪೌಂಡುಗಳಿಗೆ ಸಮ. ಅಂದು ನಾಲ್ಕು ಶಿಲಿಂಗ್‌ಗಳನ್ನು ಕೊಟ್ಟು ಒಂದು ದೊಡ್ಡ ಮೇಕೆಯನ್ನು ಕೊಂಡುಕೊಳ್ಳಲು ಸಾಧ್ಯವಿತ್ತು. ನಮ್ಮ ಕಂಪನಿಯಲ್ಲಿನ ಸಾರೊ ಎಂಬ ಅತ್ಯಂತ ಹಿರಿಯ ಆಫ್ರಿಕನ್ ಅಧಿಕಾರಿ ಹತ್ತು ಪೌಂಡ್, ಹದಿಮೂರು ಶಿಲಿಂಗ್ ಮತ್ತು ನಾಲ್ಕು ಪೆನ್ಸ್ ಪಗಾರವನ್ನು ಪಡೆಯುತ್ತಿದ್ದ. ನಮ್ಮ ಕಣ್ಣಲ್ಲಿ ಆತ ಗವರ್ನರ್ ಜನರಲ್ ತರಹ ಕಾಣಿಸುತ್ತಿದ್ದ.

ಅಂದಿನ ದಿನಮಾನದ ಹರೆಯದ ಪ್ರಗತಿಪರ ಹುಡುಗರಂತೆ ನಾನೂ ಆಫ್ರಿಕನ್ ಕ್ಲಬ್ ಸೇರಿದ್ದೆ. ನಾವು ಅಲ್ಲಿ ಟೆನಿಸ್ ಮತ್ತು ಬಿಲಿಯರ್ಡ್ಸ್ ಆಟವನ್ನು ಆಡುತ್ತಿದ್ದೆವು. ಆಫ್ರಿಕನ್ ಕ್ಲಬ್‌ನವರು ಪ್ರತಿ ವರ್ಷವೂ ಯೂರೋಪಿಯನ್ ಕ್ಲಬ್‌ನವರೊಂದಿಗೆ ಪಂದ್ಯವನ್ನು ಆಡುತ್ತಿದ್ದರು. ಆದರೆ ನಾನು ಅಂಥವೆಲ್ಲದರ ಗೊಡವೆಗೆ ಹೋಗುತ್ತಿರಲಿಲ್ಲ. ಪ್ರತಿ ಶನಿವಾರ ನಡೆಯುವ ರಾತ್ರಿನೃತ್ಯ ಎಂದರೆ ನನಗೆ ಬಲು ಇಷ್ಟ. ಅಲ್ಲಿಗೆ ಬರುವ ಮಹಿಳೆಯರ ಸಂಖ್ಯೆ ಹೆಚ್ಚಿಗಿತ್ತು. ನಗರ ಪ್ರದೇಶದಲ್ಲಿ ಕಾಣಸಿಗುವ ಶೋಕೀ ಮಹಿಳೆಯರಂತೆ ಅವರೆಲ್ಲ ಇರದಿದ್ದರೂ ಅವರು ಚೆಲುವೆಯರಂತೂ ಆಗಿರುತ್ತಿದ್ದರು.

ನನ್ನ ಬಳಿ ಹೊಸ ಬ್ರ್ಯಾಂಡ್‌ನ ರ್‍ಯಾಲಿ ಸೈಕಲ್ ಇತ್ತು. ಹೀಗಾಗಿ ಜನರೆಲ್ಲ ನನ್ನನ್ನು ಶೋಕಿಲಾಲ ಬೆನ್ ಎಂದು ಕರೆಯುತ್ತಿದ್ದರು. ಅಂದಿನ ದಿನಮಾದಲ್ಲಿ ನಾನು ಬಹು ಬೇಡಿಕೆಯ ಯುವಕನಾಗಿದ್ದೆ. ಆದರೆ ನಾನು ಅಲ್ಲಿ ಅವರೊಂದಿಗೆ ನಗಾಡಲಿ, ಹುಡುಗಾಟಿಕೆ ಮಾಡಲಿ, ಕುಡಿಯಲಿ, ಏನೇ ಶೋಕಿ ಮಾಡಿದರೂ ಅದೆಲ್ಲ ಒಂದು ಮಿತಿಯಲ್ಲಿ ಇರುತ್ತಿತ್ತು. ಈ ನೆಲದ ನಿಜವಾದ ಮಗ ಎನ್ನಿಸಿಕೊಳ್ಳಬೇಕಾದರೆ ಅವನು ನಿದ್ದೆ ಮಾಡುತ್ತಿದ್ದಂತೆಯೇ ಒಂದು ಕಣ್ಣನ್ನು ತೆರೆದು ಇಟ್ಟುಕೊಂಡಿರಲೇಬೇಕು ಎಂದು ನನ್ನ ತಂದೆ ಹೇಳುತ್ತಿದ್ದ. ನಾನು ಅದನ್ನು ಸದಾ ನನ್ನ ಸ್ಮರಣೆಯಲ್ಲಿ ಇಟ್ಟುಕೊಂಡಿದ್ದೇನೆ. ಹೀಗಾಗಿ ನಾನು ಎಲ್ಲರೊಂದಿಗೆ ಅಡುತ್ತೇನೆ ಮತ್ತು ನಗಾಡುತ್ತೇನೆ. ಎಲ್ಲರೂ ನನ್ನನ್ನು ಶೋಕಿಲಾಲ ಬೆನ್, ಶೋಕಿಲಾಲ ಬೆನ್ ಎಂದು ಕರೆಯುತ್ತಾರೆ. ಆದರೆ ಶೋಕಿತನವನ್ನು ಎಲ್ಲಿಯವರೆಗೆ ನಡೆಯಿಸಬೇಕು ಎಂದು ನನಗೆ ಗೊತ್ತಿದೆ. ಉಮುರು ನಗರದ ಮಹಿಳೆಯರು ತುಂಬಾ ಚುರುಕು. ನಾವು ‘ಅ’ ಅನ್ನುವಷ್ಟರಲ್ಲಿ ಅವರು ‘ಆ’ ಅಂದುಬಿಟ್ಟಿರುತ್ತಾರೆ. ಹೀಗಾಗಿ ನಾನು ತುಂಬಾ ಜಾಗೃತನಾಗಿರಬೇಕಾಗಿದೆ. ನನ್ನ ಮನೆಯ ದಾರಿ ಯಾವುದು ಎಂದು ನಾನು ಈವರೆಗೆ ಯಾರಿಗೂ ತೋರಿಸಿಲ್ಲ. ಆ ಮಹಿಳೆಯರು ಮಾಡಿದ ಅಡುಗೆಯನ್ನು ಈವರೆಗೂ ನಾನು ಸೇವಿಸಿಲ್ಲ. ಯಾಕೆಂದರೆ ಅವರು ತಮ್ಮ ಅಡುಗೆಯಲ್ಲಿ ‘ಪ್ರೀತಿ ರಸಾಯನವನ್ನು’ ಹಾಕುತ್ತಾರೆ. ಎಷ್ಟೋ ಹರೆಯದ ಹುಡುಗರು ಅವರ ಕೈಯಲ್ಲಿ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿರುವುದನ್ನು ನಾನು ಕಂಡಿದ್ದೇನೆ. ‘ಅವರು